# ಅನೇಕಾಂತವಾದ

'ನಾ' ವುಜಿರೆ



ಕರ್ನಾಟಕ ಸರ್ಕಾರ
**ಕನ್ನಡ ಪುಸ್ತಕ ಪ್ರಾಧಿಕಾರ**
ಬೆಂಗಳೂರು

# ಅನೇಕಾಂತವಾದ

ಲೇಖಕರು
'ನಾ' ವುಜಿರೆ
ಪ್ರಧಾನ ಸಂಪಾದಕರು
ಡಾ|| ಎಂ. ಎ. ಜಯಚಂದ್ರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಬೆಂಗಳೂರು – ೨

# ANEKANTHAVADA

written by
'Na' Ujire

First Print 2005

© Author

Pages (xii + 15) Price : Rs. 10/-

Copies : 2000

ISBN : 181-7713-184-2

Published by
N. Tippeswamy
Administrative Officer
Kannada Pustaka Pradikara
Kannada Bhavan
J.C. Road, Bangalore - 560 002

D.T.P.
Sree Lakshmi Enterprises
Bangalore - 560 078

Printer :
SREERANGA PRINTERS PVT LTD
517, Samudra Gupta Maurya Road,
Bhavaninagar, Bangalore- 19
Ph : 2667 9333, 2652 4757

# ಮುನ್ನುಡಿ

ಕರ್ಮವನ್ನು ಜಯಿಸಿದವನು ಜಿನ. ಜಿನ ಒಬ್ಬನಲ್ಲ, ಅನೇಕರು, ಸಂಖ್ಯೆಯಲ್ಲಿ ಅನಂತ. ಇಂಥ ಜಿನರಿಂದ ಬೋಧಿಸಿದ ಧರ್ಮವೇ ಜೈನಧರ್ಮ. ಇದನ್ನು ಬೇರೆ ಬೇರೆ ಕಾಲದಲ್ಲಿ ಈ ಧರ್ಮದ ಬೇರೆ ಬೇರೆ ಗುಣಗಳನ್ನು ಗುರುತಿಸಿ, ವ್ರಾತ್ಯ ಧರ್ಮ, ನಿರ್ಗ್ರಂಥ ಧರ್ಮ, ಅಹಿಂಸಾ ಧರ್ಮ, ಕ್ಷಮಾಧರ್ಮ, ಸ್ಯಾದ್ವಾದ ಧರ್ಮವೆಂದು ಹೆಸರಿಸುವುದುಂಟು. ಒಂದು ಸುಪ್ರಸಿದ್ಧ ಶ್ಲೋಕದ ಪ್ರಕಾರ ಸ್ಯಾದ್ವಾದವು ಜೈನಧರ್ಮದ ಅಮೋಘ ಲಾಂಛನವಾಗಿದೆ. ಸ್ಯಾದ್ವಾದವನ್ನು ಸಾಮಾನ್ಯವಾಗಿ ಅನೇಕಾಂತವಾದವೆಂದು ಕರೆಯುತ್ತಾರೆ.

ಪ್ರತಿಯೊಂದು ವಸ್ತುವು ಅನೇಕ ಧರ್ಮಗಳಿಂದ, ಸ್ವಭಾವಗಳಿಂದ ಅಥವಾ ಗುಣಗಳಿಂದ ಕೂಡಿವೆ. ಅವುಗಳಲ್ಲಿ ಒಂದು ಗುಣವನ್ನು ಮಾತ್ರ ಎತ್ತಿ ಹಿಡಿದು ವಾದ ಮಾಡಿದರೆ ಅದು ಏಕಾಂತವಾದ. ಆದರೆ ವಸ್ತುವಿನ ಬಹುಗುಣಗಳನ್ನು ಗಮನಿಸಿ ಅಭಿಪ್ರಾಯ ವ್ಯಕ್ತಪಡಿಸಿದರೆ ಅದು ಅನೇಕಾಂತವಾದ. ಜೈನಧರ್ಮದಲ್ಲಿ ಈ ಅನೇಕಾಂತ ದೃಷ್ಟಿಯಿಂದ ಪ್ರತಿಯೊಂದು ತತ್ತ್ವವನ್ನು ವಿವೇಚಿಸಿ, ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

"೨೬೦೦ ವರ್ಷಗಳಿಂದ ಭಾರತೀಯ ಸಾಹಿತ್ಯದಲ್ಲಿ ಅನೇಕಾಂತದ ವಿವರಣವು ಎಲ್ಲಿಯಾದರೂ ಗೋಚರಿಸಿದ್ದರೆ, ಅದು ಜೈನ ವಾಙ್ಮಯದಲ್ಲಿ ಮಾತ್ರವೆನ್ನಬಹುದು. ಅನೇಕಾಂತ ದೃಷ್ಟಿಯ ಉತ್ಥಾನ ವಿಕಾಸದ ಶ್ರೇಯಸ್ಸು ಜೈನ ದಾರ್ಶನಿಕರಿಗೆ ಸಲ್ಲುತ್ತದೆ" — ಎಂಬ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿ ಗಮನಿಸತಕ್ಕುದ್ದಾಗಿದೆ.

ಸಿದ್ಧಾಂತವನ್ನು ಪ್ರತಿಪಾದಿಸುವಲ್ಲಿ ಒಂದು ವಿಶೇಷ ಶೈಲಿಯನ್ನು ಉಪಯೋಗಿಸಿಯೇ ವಿಷಯವನ್ನು ಮಂಡಿಸಲಾಗುತ್ತದೆ. ಅದರಿಂದ ವಕ್ತೃವಿನ ಒಂದು ಗುಣವನ್ನು ಉಲ್ಲೇಖಿಸುವ ಆಭಿಪ್ರಾಯವೂ ಪ್ರಕಟಗೊಂಡಿರಬೇಕು. ಅದರೊಡನೆಯೇ ಆ ಗುಣವು ಅನ್ಯ-ಗುಣ-ಸಾಪೇಕ್ಷವಾಗಿದೆಯೆಂಬ ಆಭಿಪ್ರಾಯವೂ ಸ್ಪಷ್ಟವಾಗಿರಬೇಕು. ಜೈನ ದರ್ಶನದ ಈ ವಿಚಾರ ಮತ್ತು ವಚನ ಶೈಲಿಗಳನ್ನು ಅನೇಕಾಂತ ಮತ್ತು ಸ್ಯಾದ್ವಾದ ಎಂದು ಹೇಳುತ್ತಾರೆ.''

ಸ್ಯಾದ್ವಾದ ವಚನ ಶೈಲಿಗೆ ಸಂಬಂಧಿಸಿದ್ದರೆ, ಅನೇಕಾಂತ ವಿಚಾರ ಶೈಲಿಗೆ ಸಂಬಂಧಿಸಿದೆ. ಈ ಕೃತಿಯಲ್ಲಿ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು, ವಿಚಾರ ಶೈಲಿಗೆ ಸಂಬಂಧಿಸಿದ ಅನೇಕಾಂತವಾದವನ್ನು ಮಾತ್ರ ಸಾದರಪಡಿಸಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮ ಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರೂ, ಕರ್ನಾಟಕ ಸರ್ಕಾರದ ಸನ್ಮಾನ್ಯ ಗೃಹ ಸಚಿವರೂ ಆದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಭ. ವರ್ಧಮಾನ ಮಹಾವೀರರ ತತ್ವಗಳನ್ನು ಶ್ರೀಸಾಮಾನ್ಯರಲ್ಲಿ ಪ್ರಚುರಪಡಿಸುವ ಕಾರ್ಯವಾಗಬೇಕೆಂದು ಅಪೇಕ್ಷಿಸಿದರು. ಅವರ ಅಪೇಕ್ಷೆಯಂತೆ ಜೈನಧರ್ಮದ ಅಮೋಘ ಲಾಂಛನದಂತಿರುವ ಅನೇಕಾಂತವಾದದ ಬಗ್ಗೆ ಒಂದು ಕಿರುಪುಸ್ತಕ ತರಲು ನಿರ್ಧರಿಸಲಾಯಿತು.

ಶ್ರೀ ನಾ' ವುಜಿರೆ ಅವರ ಪೂರ್ಣ ಹೆಸರು, ಶ್ರೀ ಎನ್. ನಾಗರಾಜ್ ಪೂವಣ್ಣಿ, ಇವರು ನಮ್ಮ ಸಮಿತಿಯ ಕರೆಗೆ ಓಗೊಟ್ಟು ಈ ಕೃತಿಯನ್ನು ರಚಿಸಿಕೊಟ್ಟಿರುತ್ತಾರೆ. ಇವರಿಗೆ ಸಮಿತಿಯು ಆಭಾರಿಯಾಗಿದೆ.

ಡಾ| ಎಂ.ವಿ. ಜಯಚಂದ್ರ

ಅಧ್ಯಕ್ಷರು

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ

ಮಹೋತ್ಸವದ ಪ್ರಕಟಣಾ ಸಮಿತಿ, ಬೆಂಗಳೂರು.

## ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು – ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿ ಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿ ಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨ + ೨ = ೪ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ.

ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿ ಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ - ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ ಬೆಳೆದು ಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಜಾಣತನ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ, ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಕಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ.

ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅಪಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಅದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ , ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಅವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲ ಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ , ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ.

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ.

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು

ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರ ಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗೋಳೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆದ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ-ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * *

ಜೈನಧರ್ಮಕ್ಕೆ ಐದುಸಾವಿರ ವರ್ಷಗಳ ಪ್ರಾಚೀನ ಇತಿಹಾಸವಿದೆ. ತಾನು ಬೋಧಿಸಿದ ಅಹಿಂಸೆ ಅಪರಿಗ್ರಹ ನೀತಿ, ಸಮ್ಯಕ್‌ತತ್ವ ಹಾಗೂ ಅನೇಕಾಂತವಾದಗಳ ಪ್ರತಿಪಾದನೆಯ ಮುಖೇನ ಈ ನೆಲದ ಜೀವನಗತಿಯ ಮೇಲೆ ಅಪಾರ ಪರಿಣಾಮವನ್ನು ಉಂಟುಮಾಡಿದ ಧರ್ಮವಿದು. ಕನ್ನಡ ಸಾಹಿತ್ಯದ ಮಟ್ಟಿಗಂತೂ ಜೈನಧರ್ಮದ ಪ್ರಭಾವ ಪ್ರೇರಣೆಗಳು ನಖಮಾಂಸ ಭಾವದ ನೆಲೆಯವು. ಕನ್ನಡ ನೆಲದಲ್ಲಿ ನಡೆದ ಹಲವು ಧಾರ್ಮಿಕ ಸಂಘರ್ಷಗಳ ಮುಖಾಮುಖಿತ್ವದಲ್ಲಿ ಜೈನಧರ್ಮದ ಏಳುಬೀಳುಗಳು ಕನ್ನಡ ಸಂಸ್ಕೃತಿಯ ಜೀವನೇತಿಹಾಸವನ್ನು ಪ್ರತಿಬಿಂಬಿಸುವುದೇ ಆಗಿದೆ.

ಭಗವಾನ್ ಮಹಾವೀರರ ೨೬೦೦ನೆಯ ಜನ್ಮಕಲ್ಯಾಣ ಮಹೋತ್ಸವದ ಅಂಗವಾಗಿ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವು ವಿಚಾರಗಳ ಪುಸ್ತಿಕೆಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಸಮಣಸುತ್ತಂ , ಅನೇಕಾಂತವಾದ, ಅಹಿಂಸೆ, ಹೇಮಚಂದ್ರ , ಮಹಾವೀರವಾಣಿ, ಸಾಮ್ರಾಟ್ ಶ್ರೇಣಿಕ ಬಿಂಬಸಾರ, ಮಹಾಪುರಾಣ, ಕುಂದಾಕುಂದಾಚಾರ್ಯ, ಚಂದನಾಂಬಿಕೆ - ಇವೇ ಈ ಪುಸ್ತಿಕೆಗಳು. ಧಾರ್ಮಿಕ ವಿಚಾರಗಳು ಕೇವಲ ಪಂಡಿತಮಾನ್ಯರ ಜಿಜ್ಞಾಸೆಯ ವಿಚಾರಗಳಾಗಿ

ಮಾತ್ರ ಉಳಿಯದೆ ಶ್ರೀಸಾಮಾನ್ಯರ ಅರಿವಿಗೆ ಅನ್ನವಾಗಬೇಕು ಎಂಬುದು ಇಂಥ ಪ್ರಕಟಣೆಯ ಹಿಂದಿನ ಉದ್ದೇಶ.

ಭಗವಾನ್ ಮಹಾವೀರರ ೨೬೦೦ನೇಯ ಜನ್ಮಕಲ್ಯಾಣ ಮಹೋತ್ಸವದ ರಾಜ್ಯ ಸಮಿತಿಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಅಪೇಕ್ಷೆಗೆ ಅನುಸಾರವಾಗಿ ಈ ಪ್ರಕಟಕಾರ್ಯ ನಡೆಯುತ್ತಿದೆ. ಸಂಪಾದಕ ಮಂಡಳಿಯವರು ವಿಷಯಗಳ ಆಯ್ಕೆ ಮಾಡಿ, ವಿಷಯತಜ್ಞರಿಂದ ಬರೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಂಪಾದಕರಾಗಿ ಡಾ॥ ಎಂ.ಎ. ಜಯಚಂದ್ರ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲ ಮಹನೀಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ದಿನಾಂಕ : ೮.೯.೨೦೦೫ ಪ್ರೊ। ಎಸ್.ಜಿ. ಸಿದ್ಧರಾಮಯ್ಯ
ಸ್ಥಳ : ಬೆಂಗಳೂರು ಅಧ್ಯಕ್ಷರು

# ಅನೇಕಾಂತವಾದ

ಈ ಜಗತ್ತು ಅತ್ಯಂತ ವಿಶಾಲ. ಇಲ್ಲಿ ಇರುವ ವಸ್ತುಗಳು ಅನೇಕ ; ವಿವಿಧ ವರ್ಗಕ್ಕೆ ಸೇರಿದವು. ಇಲ್ಲಿರುವ ಜೀವಿಗಳ ಸಂಖ್ಯೆ ಅಪಾರ. ಅವೂ ವಿವಿಧ ಜಾತಿಗೆ ಸೇರಿದವು. ಇವೆಲ್ಲವನ್ನೂ ಅರ್ಥಮಾಡಿಕೊಳ್ಳುವ ಮನುಷ್ಯರಲ್ಲೂ ಎಷ್ಟೊಂದು ಜಾತಿ, ವರ್ಗ, ವರ್ಣ ಭೇದಗಳು ! ಈ ಮನುಷ್ಯರನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಲ್ಲೂ ವೈವಿಧ್ಯ ಎಂತಹುದು !

ಈ ಭೂಮಿಯ ಮೇಲಿರುವ ಪ್ರತಿಯೊಂದು ವಸ್ತುವೂ ಪರಸ್ಪರ ವಿರೋಧಿಯೆಂದು ತೋರುತ್ತದೆ. ಪ್ರತಿಯೊಂದು ವಸ್ತುವೂ, ಮನುಷ್ಯರೂ ಪ್ರಸಕ್ತ ಸನ್ನಿವೇಶದಲ್ಲಿ ಪರಸ್ಪರ ಭಿನ್ನರೆಂದು ಕಾಣಿಸುತ್ತಾರೆ. ಪ್ರತಿಯೊಂದು ಪ್ರಾಣಿಯೂ ಇತರ ಪ್ರಾಣಿಗಳಿಗಿಂತ ಭಿನ್ನವೆಂದು ಕಾಣಿಸುತ್ತದೆ. ಪ್ರತಿಯೊಂದು ಮರಗಿಡವೂ ಇತರ ಮರ ಗಿಡಗಳಿಗಿಂತ ಭಿನ್ನವೆಂದು ಗೋಚರವಾಗುತ್ತದೆ. ಅಷ್ಟೇಕೆ, ಕೆಲವೊಮ್ಮೆ ಒಂದೇ ವಸ್ತುವಿನ, ವ್ಯಕ್ತಿಯ, ಜೀವಿಯ, ಮರ – ಗಿಡಗಳ ರೂಪ, ಬಣ್ಣ, ಆಕಾರಗಳು ಬೇರೆ – ಬೇರೆ ಕಾಲಗಳಲ್ಲಿ ಬೇರೆ ಬೇರೆಯಾಗಿ ಗೋಚರಿಸಲು ಸಾಧ್ಯ. ಒಬ್ಬ ವ್ಯಕ್ತಿ ಬೆಳಿಗ್ಗೆ ಇದ್ದಂತೆ ಮಧ್ಯಾಹ್ನವಿರುವುದಿಲ್ಲ ; ಮಧ್ಯಾಹ್ನವಿದ್ದಂತೆ ಸಂಜೆ ಇರುವುದಿಲ್ಲ ; ಸಂಜೆಯಿದ್ದಂತೆ ಬೆಳಿಗ್ಗೆ ಇರುವುದಿಲ್ಲ, ಬದಲಾಗುತ್ತಾ ಇರುತ್ತಾನೆ. ಎಷ್ಟೇ ಬದಲಾದರೂ ವ್ಯಕ್ತಿ ಮೂಲತಃ ಅವನೇ ಇರುತ್ತಾನೆ – ಎಂಬುದು ವಾಸ್ತವಿಕ.

ಅಂತೆಯೇ ಒಂದು ಪ್ರಾಣಿ, ಒಂದು ಮರ, ಒಂದು ನದಿ, ಒಂದು ಜಲಪಾತ, ಒಂದು ಕೆರೆ, ಆಕಾಶದ ಒಂದು ಮೋಡ – ಇತ್ಯಾದಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡೋಣ. ತುಲನಾತ್ಮಕ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲು ಯತ್ನಿಸೋಣ.

ಒಂದು ಹೂವಿನ ಗಿಡ ಬೆಳಿಗ್ಗೆ ಮೊಗ್ಗೆಯಿಂದ ಕೂಡಿರುತ್ತದೆ. ಸೂರ್ಯೋದಯವಾದಾಗ ಹೂ ಅರಳ ತೊಡಗುತ್ತದೆ. ಮಧ್ಯಾಹ್ನ ಅರಳಿದ ಹೂಗಳಿಂದ ಶೋಭಿಸುತ್ತದೆ. ಸಂಜೆ ಹೂಗಳು ಬಾಡ ತೊಡಗುತ್ತವೆ. ರಾತ್ರಿ ಹೊತ್ತು

ಬಾಡಿದ ಹೂಗಳಿಂದ ಕೂಡಿರುತ್ತದೆ. ಆದರೆ ಈ ಹೂವಿನ ಗಿಡದಲ್ಲಿ ಎಷ್ಟೇ ಬದಲಾವಣೆಗಳುಂಟಾದರೂ ಮೂಲತಃ ಗಿಡವೊಂದೇ - ಎಂಬುದನ್ನು ಮರೆಯುವಂತಿಲ್ಲ. ಒಂದೇ ಗಿಡದಲ್ಲಿ ಅನೇಕ ಸ್ವರೂಪಗಳಿದ್ದರೂ, ಅವು ಪರಸ್ಪರ ವಿರೋಧಿಗಳಲ್ಲ. ಒಂದೇ ಸತ್ಯದ ಭಿನ್ನ - ಭಿನ್ನ ಆಯಾಮಗಳು ಹಾಗೂ ಪರಸ್ಪರ ಪೂರಕವೆಂದು ಅರಿತಾಗ ಪೂರ್ಣ ಸತ್ಯದ ಅರಿವು ಉಂಟಾಗುತ್ತದೆ. ಇದರ ವಿಶ್ಲೇಷಣೆಗಿರುವ ಸಿದ್ಧಾಂತವೇ ಜೈನ ಧರ್ಮದ ಅನೇಕಾಂತವಾದ.

ವಿಶ್ವದುದ್ದಗಲಕ್ಕೂ ಅನೇಕ ಧರ್ಮಗಳ ಸ್ಥಾಪನೆಯಾಯಿತು. ಆಯಾ ಧರ್ಮದ ಸ್ಥಾಪಕರು ತಮ್ಮ - ತಮ್ಮ 'ಧರ್ಮದ ಪ್ರಚಾರ ನಡೆಸುತ್ತಾ' ಬಂದರು. ಅವರಿಗೆ ಅನೇಕ ಮಂದಿ ಅನುಯಾಯಿಗಳೂ ಕಾಣಿಸಿಕೊಂಡರು. ಈ ಧರ್ಮದ ಅನುಯಾಯಿಗಳೆಲ್ಲರೂ ತಮ್ಮ 'ಧರ್ಮಶ್ರೇಷ್ಠ' - ಎಂಬ ಲಕ್ಷ್ಯವನ್ನಿರಿಸಿಕೊಂಡು ಜಗತ್ತಿನ ಎಲ್ಲಾ ಭಾಗಗಳಲ್ಲೂ ಧರ್ಮ - ತತ್ವಜ್ಞಾನಗಳ ಪ್ರಸಾರ ಮಾಡುತ್ತಾ ಬಂದರು.

'ತಮ್ಮ ಧರ್ಮ ಶ್ರೇಷ್ಠ' - ಎಂಬ ವಾದದ ಜೊತೆಗೇ 'ಇತರ ಧರ್ಮಗಳೆಲ್ಲವೂ ನಿಕೃಷ್ಟ' - ಎಂಬ ಧೋರಣೆಯೂ ಸೇರಿಕೊಂಡಾಗ ಧರ್ಮದ ಮೂಲ ಉದ್ದೇಶವೇ ಮರೆಯಾಗಿ ರಕ್ತಪಾತ, ಹಿಂಸೆ, ಗೊಂದಲ, ಜಗಳ, ಯುದ್ಧಗಳಿಗೇ ಧರ್ಮವು ಕಾರಣವಾದುದನ್ನು ಪ್ರಾಚೀನ ಇತಿಹಾಸದಲ್ಲೂ, ಅರ್ವಾಚೀನ ಇತಿಹಾಸವಾದ ವರ್ತಮಾನ ಪತ್ರಿಕೆಗಳಲ್ಲೂ ಕಾಣುತ್ತೇವೆ.

'ಧರ್ಮ'ದ ಮೂಲ ಉದ್ದೇಶವೇನು ?

**ಸಂಸಾರ ದುಃಖತಃ ಸತ್ವಾನ್**

**'ಯೋ ಧರತ್ಯುತ್ತಮೇ ಸುಖೇ'** - ಜಗತ್ತಿನ ಜೀವಿಗಳನ್ನು ನಿಜವಾದ ಸುಖದ ಕಡೆಗೆ, ಉತ್ತಮ ಸುಖದೆಡೆಗೆ ಒಯ್ದು, ಅಂತಹ ಸುಖದ ಸ್ಥಿತಿಯಲ್ಲಿ ಸ್ಥಾಪಿಸಬಲ್ಲದೋ ಅದುವೆ 'ಧರ್ಮ'.

ಜಗತ್ತಿನ ಎಲ್ಲಾ ಧರ್ಮಗಳ ಅಂತಿಮ ಗುರಿಯೂ ಇಂತಹ ಸುಖದ ಸ್ಥಾಪನೆಯಾಗಬೇಕೇ ಹೊರತು, ಹಿಂಸೆ, ಕೊಲೆ, ಕಳ್ಳತನ, ವ್ಯಭಿಚಾರ, ಅತ್ಯಾಚಾರ, ಭ್ರಷ್ಟಾಚಾರಗಳು ಆಗಲು ಸಾಧ್ಯವೇ ಇಲ್ಲ.

## ೨೬ ಶತಮಾನಗಳ ಹಿಂದೆ :

ಭಾರತದ ಪುಣ್ಯಭೂಮಿಯಲ್ಲಿ ೨೬೦೦ ವರ್ಷಗಳ ಹಿಂದೆ ಉದಿಸಿ, ಜಗತ್ತಿಗೆಲ್ಲ ಅಹಿಂಸೆ, ಸತ್ಯ, ಅಪರಿಗ್ರಹ, ಅಚೌರ್ಯ ಮತ್ತು ಬ್ರಹ್ಮಚರ್ಯಗಳ ಉಪದೇಶ ನೀಡಿದ ಮಹಾಪುರುಷ, ಭಗವಾನ್ ಶ್ರೀ ಮಹಾವೀರ ಸ್ವಾಮಿಯ ಆದರ್ಶಮಯ ಜೀವನವು ಇಡೀ ವಿಶ್ವಕ್ಕೇ ದಾರಿದೀಪವಾಗಿತ್ತು.

ಆಧ್ಯಾತ್ಮಿಕ ಪ್ರಪಂಚದಲ್ಲಿ ಕ್ರಾಂತಿಕಾರಿಯಾದ ಹಾದಿಯಲ್ಲಿ ನಡೆದ ಮಹಾವೀರ ಸ್ವಾಮಿಯ ವೈಶಿಷ್ಟ್ಯವೆಂದರೆ - ಯಾವುದೇ ಒಂದು ಹೊಸ ಧರ್ಮದ ಸ್ಥಾಪನೆ ಮಾಡದೆ, ಆ ಕಾಲದಲ್ಲಿ ಪ್ರಚಲಿತವಾಗಿದ್ದ ವಿವಿಧ ಮತ ಧರ್ಮ - ಸಂಪ್ರದಾಯಗಳಲ್ಲಿರುವ ಉತ್ತಮಾಂಶಗಳನ್ನು ಗುರುತಿಸಿ, ಮನುಕುಲದ ಮುಕ್ತಿಗೆ - ಬಿಡುಗಡೆಯ ದಾರಿಯನ್ನು ತೋರಿದುದು.

ಶ್ರೀ ವೃಷಭನಾಥ ತೀರ್ಥಂಕರರಿಂದ ಆರಂಭಿಸಿ, ೨೩ನೇ ತೀರ್ಥಂಕರರಾದ ಶ್ರೀ ಪಾರ್ಶ್ವನಾಥ ಸ್ವಾಮಿಯವರಿಗೆ ಎಲ್ಲಾ ತೀರ್ಥಂಕರರು ಉಪದೇಶಿಸಿದ ಧರ್ಮದ ಸಿದ್ಧಾಂತಗಳನ್ನು ಜನಮನಕ್ಕೆ ತಲುಪಿಸುವಂತಹ ಕಾರ್ಯವನ್ನು ಶ್ರೀ ಮಹಾವೀರ ಸ್ವಾಮಿ ಅತ್ಯಂತ ವ್ಯಾಪಕವಾಗಿ ಮಾಡಿದರು.

'ತಮ್ಮ ತತ್ವವೇ ಮುಖ್ಯ'- ಎಂದು ನಂಬಿದ ಏಕಾಂತವಾದಿಗಳ ಉಪದೇಶದ ತತ್ವಗಳಲ್ಲಿರುವ ಉತ್ತಮಾಂಶಗಳನ್ನು ಸ್ವೀಕರಿಸುವ ಔದಾರ್ಯಪೂರ್ಣ ದೃಷ್ಟಿ ಅವರಲ್ಲಿತ್ತು. ಅನೇಕ ಮಂದಿ ಏಕಾಂತವಾದಿಗಳೆಲ್ಲರ ತತ್ವಗಳನ್ನು ಸಮನ್ವಯಗೊಳಿಸುವ ಉದಾತ್ತದೃಷ್ಟಿಯೇ - ಅನೇಕಾಂತವಾದದ ಸೃಷ್ಟಿಗೆ ಕಾರಣವಾಗಿತ್ತು.

ಅನೇಕ ಹೆಸರಿನ ನದಿಗಳು ಹೋಗಿ ಸಮುದ್ರವನ್ನು ಸೇರಿದಾಗ, ಅಲ್ಲಿ ಬೇರೆ ಬೇರೆ ನದಿಯ ನೀರಿನ ಗುಣ-ರುಚಿಗಳು ಇರುವುದಿಲ್ಲ. ಬದಲಾಗಿ ಸಮುದ್ರಕ್ಕೆ ತನ್ನದೇ ಆದ ಪ್ರತ್ಯೇಕ ರುಚಿಯಿರುತ್ತದೆ. ಅದೇ ರೀತಿಯಲ್ಲಿ ಅನೇಕ ಧಾರ್ಮಿಕ ತತ್ವ-ಸಿದ್ಧಾಂತಗಳಿದ್ದರೂ, ಅವೆಲ್ಲವೂ ಅನೇಕಾಂತವಾದದಲ್ಲಿ ವಿಲೀನವಾದಾಗ ಬೇರೆಯೇ ಆದ ವಿಶಿಷ್ಟ ಸ್ವರೂಪವನ್ನು ಹೊಂದಿ ಲೋಕಕ್ಕೆ ಆದರ್ಶ ಸತ್ಯದ ಬೆಳಕನ್ನು ನೀಡಲು ಸಮರ್ಥವಾಗುತ್ತದೆ.

## ಮಹಾವೀರನು ತೋರಿದ ಬೆಳಕು:

ಜಗತ್ತಿನ ಸೃಷ್ಟಿಕರ್ತನಾದ, ಸರ್ವಶಕ್ತನಾದ ಪರಮಾತ್ಮನೊರ್ವ ನಿರುವನೆಂಬ ತತ್ವವನ್ನು ತಿರಸ್ಕರಿಸಿ, ಮಾನವನೇ ಮಹಾ ಮಾನವನಾಗಿ ಪರಮ ಶ್ರೇಷ್ಠನಾದ ಪರಮಾತ್ಮನಾಗಬಲ್ಲನೆಂಬುದಾಗಿ ಮಾನವನ ಆತ್ಮದ ಹಿರಿಮೆಯನ್ನು ಎತ್ತಿ ಹಿಡಿದು ಹೊಸತನವನ್ನು ತೋರಿದವರು ಮಹಾವೀರ ಸ್ವಾಮಿ. ತನ್ನ ತಪ - ಸಾಧನೆಗಳ ಬಲದಿಂದ ತೀರ್ಥಂಕರನೆನಿಸಿ, ಇತರ ಜನತೆಗೂ ಇದೇ ರೀತಿಯಿಂದ ಪಾಪ-ಪುಣ್ಯಗಳೆಂಬ ಕರ್ಮಗಳ ಬಂಧನವು ಹರಿದಾಗ, ಆತ್ಮನೇ ಪರಮಾತ್ಮನಾಗಬಲ್ಲನೆಂದು ಹೊಸ ಬೆಳಕನ್ನು, ಆಶೆಯನ್ನು ತೋರಿದರು. ಎಲ್ಲರೂ ಈ ತೆರನಾದ ಮುಕ್ತಿಯನ್ನು ಪಡೆಯಲು ಬೇಕಾದ ಸಾಧನೆಯಲ್ಲಿ ಮಗ್ನರಾಗ ಬೇಕೆಂದರು. ಮಹಾವೀರರು ಆತ್ಮನ ಅದ್ಭುತ ಶಕ್ತಿಯ ಬಗೆಗೆ ಹೀಗೆಂದರು - "ಮಾನವನೇ, ನೀನೇ ಸ್ವತಃ ಈಶ್ವರನಾಗ ಬಲ್ಲೆ. ಎದ್ದು ನೋಡು, ಕಣ್ಣುಗಳನ್ನು ತೆರೆ. ನಿನ್ನಲ್ಲೇ ಪರಮಾತ್ಮ ತತ್ತ್ವವು ಸುಪ್ತವಾಗಿದೆ. ನಿನ್ನ ಆತ್ಮನೇ ನಿನಗೆ ಮಿತ್ರನೂ ಹೌದು, ಶತ್ರುವೂ ಹೌದು, ಸನ್ಮಾರ್ಗದಲ್ಲಿ ನಡೆಯಲು ನಿನಗೆ ಪ್ರೇರಣೆಯನ್ನು ನೀಡುವ ಆತ್ಮನೇ ಮಿತ್ರ. ದುರ್ಮಾರ್ಗದಲ್ಲಿ ನಡೆಯಲು ಪ್ರೋತ್ಸಾಹವನ್ನೀಯುವ ಆತ್ಮನೇ ನಿನ್ನ ಅತಿ ದೊಡ್ಡ ಶತ್ರು. ಆದ್ದರಿಂದ ಮುಕ್ತಿಯ ಏಕಮಾತ್ರ ಉಪಾಯವೆಂದರೆ ಸತ್ಕರ್ಮಗಳ ಮೂಲಕ ಆತ್ಮ ಗುಣಗಳ ವಿಕಾಸವನ್ನು ಸಾಧಿಸಿ, ಅಹಿಂಸೆ, ಸತ್ಯ ಹಾಗೂ ತಪಸ್ಸಿನ ಮಾರ್ಗವನ್ನು ಸ್ವೀಕರಿಸುವುದೇ ಆಗಿದೆ.

ಮಹಾವೀರರ ಇನ್ನೊಂದು ವೈಶಿಷ್ಟ್ಯವೆಂದರೆ ಸಮನ್ವಯ ಪ್ರವೃತ್ತಿಯಾಗಿದೆ. ಹಲವು ಸಿದ್ಧಾಂತಗಳ ನಡುವೆ ಸಮನ್ವಯವನ್ನು ಸಾಧಿಸಲೆತ್ನಿಸಿದ ಅನೇಕಾಂತವಾದ ಅಥವಾ ಸ್ಯಾದ್ವಾದದ ಮೂಲಕ ಶಾಂತಿ, ಸಹ ಅಸ್ತಿತ್ವ ಸಾಧ್ಯವೆನಿಸುತ್ತದೆ. ಇದರ ಅಭಾವದಿಂದಾಗಿಯೇ ಅಶಾಂತಿ – ಸಂಘರ್ಷಗಳುಂಟಾಗುತ್ತವೆ. ಮಹಾವೀರರು ಹಲವು ಮತ-ಮತಾಂತರಗಳ ನಡುವಣ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ, 'ಸ್ಯಾತ್' (ಇರಬಹುದು) ಎಂಬ ಶಬ್ದದ ಮೂಲಕ ವಿನೂತನವಾದ ಸಾಮಂಜಸ್ಯವನ್ನು ಸಾಧಿಸಿ, ಶಂಕೆ-ಸಂದೇಹಗಳ ಮೂಲವನ್ನೇ ಕಿತ್ತು ಹಾಕಿದ. ಇತರರ ಅಭಿಪ್ರಾಯಗಳನ್ನು ಅರಿತುಕೊಳ್ಳುವುದು ಹಾಗೂ ಇತರರಿಗೆ ತನ್ನ ಅಭಿಪ್ರಾಯಗಳನ್ನು ತಿಳಿಸುವುದೇ ಅನೇಕಾಂತ ದರ್ಶನದ ಮೂಲವಾಗಿದೆ. ಹೀಗೆ ಮಹಾವೀರರು ಹಲವು ಮತ-ಸಂಪ್ರದಾಯಗಳ ನಡುವೆ ನಡೆಯಬಹುದಾಗಿದ್ದ ಘರ್ಷಣೆಯನ್ನು ತಪ್ಪಿಸಿ, ಅನೇಕಾಂತ ದರ್ಶನದ ಮೂಲಕ ಸಮಾನತೆ ಹಾಗೂ ಔದಾರ್ಯದ ಹೊಸ ಹಾದಿಯ ಮೇಲೆ ನಡೆದು, ಲೋಕ ಶಾಂತಿಗೆ ತಳಹದಿಯನ್ನೇ ಹಾಕಿಕೊಟ್ಟರು. ಸುಖ, ಅಶಾಂತಿ-ಕಷ್ಟ ಪರಂಪರೆಗಳ ಅಂಧಕಾರದಲ್ಲಿ ತೊಳಲಾಡುತ್ತಿರುವ ಮಾನವ ಜನಾಂಗಕ್ಕೆ ಅಮೃತ ವಾಣಿಯ ಸೇಚನದ ಮೂಲಕ ದಾರಿ ತೋರಿ, ಆತ್ಮನ ಶಕ್ತಿಯನ್ನು ಜಾಗೃತಗೊಳಿಸಿ, ನಿಜವಾದ ಮಾನವರಾಗಲು ಪ್ರೇರಣೆ ನೀಡಿದ ಈ ಮಹಾವೀರಸ್ವಾಮಿಯು, ಈ ಯುಗಪುರುಷ, ಜನತೆಯ ಪಾಲಿಗೆ 'ಭಗವಾನ್ ಮಹಾವೀರರೇ' ಆದುದು ನಮ್ಮ ಇತಿಹಾಸದಲ್ಲೇ ಒಂದು ಅವಿಸ್ಮರಣೀಯ ಘಟನೆಯಾಗಿದೆ.

## ಅನೇಕಾಂತವಾದದ ಮಹತ್ವ:

ತೀರ್ಥಂಕರರಿಂದ ಪ್ರಣೀತವಾದ ಜೈನಧರ್ಮದ ಮಹತ್ವಪೂರ್ಣವಾದ ಬುನಾದಿಯೆಂದರೆ - ಅನೇಕಾಂತವಾದ. ಇದನ್ನು ಕೆಲವು ಆಚಾರ್ಯರು ಅನೇಕಾಂತವಾದ ಸಪ್ತಭಂಗಿಯೆಂದೂ ಕರೆದಿದ್ದಾರೆ. ಮೂಲತಃ ಇತರ ವ್ಯಕ್ತಿಗಳು, ಇತರ ಧರ್ಮಗಳು ಹಾಗೂ ಇತರ ಸಿದ್ಧಾಂತಗಳ ಜೊತೆಗೆ ಸಹಿಷ್ಣುತೆಯಿಂದ ಪ್ರವರ್ತಿಸುವುದನ್ನು ಕಲಿಸಿಕೊಡುವ ಆ ಅನೇಕಾಂತವಾದವು ಜೈನ ಧರ್ಮದ ಜೀವಾಳವೇ ಆಗಿದೆ. ಸಹಸ್ರ ಸಹಸ್ರ ವರ್ಷಗಳಿಂದ ಪ್ರಸಾರದಲ್ಲಿರುವ ಈ ಸಿದ್ಧಾಂತವು

ಭೂತ-ಭವಿಷ್ಯತ್-ವರ್ತಮಾನಗಳಲ್ಲಿ ಈ ಸಮಾಜ ಪುರುಷನನ್ನು ಬಾಧಿಸತಕ್ಕಂತಹ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನೊದಗಿಸಬಲ್ಲ ರಾಮಬಾಣವಾಗಿದೆ. ಜಿನ ಪ್ರಣೀತವಾದ ಸರ್ವೋದಯ ತೀರ್ಥದಲ್ಲಿ ಮುಳುಗೆದ್ದು ಬಂದ ಈ ಸಿದ್ಧಾಂತವು ಈ ಜಗತ್ತಿನ ಸಾಮಾಜಿಕ, ಆರ್ಥಿಕ, ರಾಜನೈತಿಕ - ಮೊದಲಾದ ವಿಭಿನ್ನ ವ್ಯಾಧಿಗಳಿಗೆ ದಿವ್ಯೌಷಧವಾಗಿದೆ.

ಜೈನಾಚಾರ್ಯರು ಈ ಜಗತ್ತಿನ ಎಲ್ಲ ವಸ್ತುಗಳನ್ನು ಎರಡು ವಿಧದಲ್ಲಿ ವಿಂಗಡಿಸುವರು.

೧) ಜೀವ ೨) ಅಜೀವ. ಅಜೀವತತ್ವದಲ್ಲಿ ಐದು ವಿಭಾಗಗಳಿವೆ. ೧) ಪುದ್ಗಲ ೨) ಧರ್ಮ ೩) ಅಧರ್ಮ ೪) ಆಕಾಶ ೫) ಕಾಲ. ಹೀಗೆ ಜೀವದೊಡನೆ ೫ ಅಜೀವ ತತ್ವಗಳನ್ನು ಸೇರಿಸಿದರೆ ಆರು ತತ್ವಗಳಾಗುತ್ತವೆ. ಇವನ್ನೇ ಷಡ್ - ದ್ರವ್ಯಗಳೆನ್ನುತ್ತಾರೆ. ಈ ಎಲ್ಲಾ ವಸ್ತುಗಳ ವಿಶ್ಲೇಷಣೆಯ ಮೂಲಕ ಜಗತ್ತನ್ನು ಅರ್ಥ ಮಾಡಿಕೊಳ್ಳಬಹುದು.

ಈ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವು ಪರಸ್ಪರ ವಿರೋಧಿಯೆಂದು ನಮಗೆ ತೋರಬಹುದು. ಆದರೆ ಆ ಭಿನ್ನತೆಯನ್ನು ಅರ್ಥಮಾಡಿಕೊಂಡಾಗಲೇ ಪೂರ್ಣ ಸತ್ಯದ ಅರಿವಾಗಬಹುದು.

ನಾವು ಪ್ರತಿನಿತ್ಯವೂ ವೀಕ್ಷಿಸುವ ಆಗಸವನ್ನೇ ಗಮನಿಸೋಣ. ಬೆಳಗ್ಗೆ ಬಾನಿನಲ್ಲಿ ಸೂರ್ಯನು ಮೂಡಿ ಬರುವ ಈ ಆಗಸವೆಷ್ಟು ಸುಂದರ ! ಅಲ್ಲಿನ ವಿವಿಧ ವರ್ಣಗಳ ಸಂಯೋಜನೆ ಅದೆಷ್ಟು ಬಂಧುರ ! ಕಲಾವಿದನ ಕುಂಚದಿಂದಿಳಿದು ಬಂದ ಕಲಾ ಪ್ರತಿಭೆಯಂತೆ ! ಆದರೆ ಅದೇ ಸೂರ್ಯನ ಮಧ್ಯಾಹ್ನದ ಸುಡುವ ಬಿಸಿಲೆಷ್ಟು ಅಸಹನೀಯ ! ಈ ಸೂರ್ಯನೆಷ್ಟು ಸುಡುತ್ತಾನಪ್ಪ ! ಎಂದು ಬೈಯಲು ಸಾಧ್ಯವೆ ? ಇಲ್ಲ, ಏಕೆಂದರೆ ಮತ್ತೆ ಸಂಜೆಯಾಗುತ್ತಿದ್ದಂತೆಯೇ ಉರಿಬಿಸಿಲಿನ ತಾಪ ಕಡಿಮೆಯಾಗುತ್ತದೆ. ಪಶ್ಚಿಮ ದಿಸೆಯಲ್ಲೆಲ್ಲ ಹೊಂಬಣ್ಣ ಚೆಲ್ಲಿದಂತಾಗುತ್ತದೆ ; ತಂಗಾಳಿ ಬೀಸುತ್ತದೆ. ಆಗ ಮತ್ತೊಮ್ಮೆ ಎಂತಹ ಅದ್ಭುತ ಆಕರ್ಷಣೆ ! ಮತ್ತೆ

ಬಾನಿನಂಗಳದಲ್ಲಿ ಕರಾಳ-ಕಗ್ಗತ್ತಲು ವ್ಯಾಪಿಸಿದಾಗ ಅದೆಷ್ಟು ಭೀಕರ ! ಆಕಾಶವೊಂದೇ, ಅದಕ್ಕೆಷ್ಟು ರೂಪ, ಆಕಾರ, ಬಣ್ಣಗಳು !?

ಆದರೆ ಎಲ್ಲವೂ ಒಂದೇ ಆಗಸದ ರೂಪಗಳು. ಒಂದರದೇ ಅನೇಕ ಆಕಾರ-ಸ್ವರೂಪಗಳು. ಹಾಗಿದ್ದರೂ ಯಾವುದೂ ಪ್ರತ್ಯೇಕವಲ್ಲ, ಅವೆಲ್ಲವೂ ಒಂದೇ ವಸ್ತುವಿನ ಬಗೆಗೆ ಅನೇಕ ತಥ್ಯಗಳನ್ನು ಅಭಿವ್ಯಕ್ತಿಸುತ್ತವೆಂಬುದು ಮಾತ್ರ ಸತ್ಯ.

ಒಂದು ಸತ್ಯಕ್ಕೆ ಒಂದೇ ಮುಖವೆಂದು ಭಾವಿಸುವವ ಅಜ್ಞಾನಿ. ಕುರುಡ ಹಿಡಿದದ್ದೇ ಬಡಿಗೆಯೆಂಬ ಧೋರಣೆಯ ಮಂದಿ ಪೂರ್ಣ ಸತ್ಯವನ್ನು ಅರಿಯಲಾರರು. ಇದಕ್ಕೆ ನಿದರ್ಶನವಾಗಿ ಐದು ಮಂದಿ ಕುರುಡರ ಕಥೆಯನ್ನು ಹೇಳುವುದುಂಟು. ಒಮ್ಮೆ ಕುರುಡರಿಗೂ ಆನೆಯನ್ನು ನೋಡಬೇಕೆಂಬ ಬಯಕೆ ಯುಂಟಾಯಿತಂತೆ-ಅಜ್ಞಾನಿಗೂ, ಮೂರ್ಖನಿಗೂ ಸತ್ಯವನ್ನರಿಯಬೇಕೆಂಬ ಬಯಕೆಯುಂಟಾದಂತೆ. ಅವರೆಲ್ಲರೂ ಒಂದಾಗಿ ಆನೆಯಿದ್ದಲ್ಲಿಗೆ ತೆರಳಿ ತಮ್ಮ ಸ್ಪರ್ಶ ಜ್ಞಾನದ ವೈಶಿಷ್ಟ್ಯದಿಂದ ಆನೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಸಿದರು. ಒಬ್ಬ ಆನೆಯ ಮೈಯನ್ನು ಮುಟ್ಟಿ "ಓಹೋ, ಇದೊಂದು ಗೋಡೆಯಂತಿದೆ" ಎಂದು ನುಡಿದ. ಇನ್ನೊಬ್ಬ ಅದರ ಸೊಂಡಿಲನ್ನು ಮುಟ್ಟಿ "ಅಬ್ಬಾ ಇದೊಂದು ಹೆಬ್ಬಾವಿನಂತಿದೆ" - ಎಂದ. ಮೂರನೆಯವ ಅದರ ಬಾಲವನ್ನು ಸ್ಪರ್ಶಿಸಿ "ಇದೊಂದು ಹಗ್ಗವೇ ಸರಿ" ಎಂದು ಹೇಳಿದ. ನಾಲ್ಕನೆಯವ ಅದರ ಕಿವಿಯನ್ನು ಮುಟ್ಟಿ "ಇದೊಂದು ಗೆರಸೆಯಂತಿದೆ"- ಎಂದು ತಿಳಿದ. ಐದನೆಯವ ಅದರ ಕಾಲನ್ನು ಮುಟ್ಟಿ "ಆನೆಯೆಂದರೆ ಒಂದು ಕಂಬದಂತಿದೆ" ಎಂದು ತನ್ನ ನಿರ್ಣಯವನ್ನು ಸಾರಿದ. ಪ್ರತಿಯೊಬ್ಬನಿಗೂ ತಾನು ಮುಟ್ಟಿ ತಿಳಿದದ್ದೇ ಪೂರ್ಣ ಸತ್ಯವೆಂಬ ನಂಬಿಕೆ. ಆದ್ದರಿಂದ ಅವರು ಪರಸ್ಪರ ಕಚ್ಚಾಡತೊಡಗಿದರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಹಿಂದು, ಮುಸ್ಲಿಂ, ಕ್ರೈಸ್ತ, ಸಿಕ್ಖ - ಮೊದಲಾದ ಧರ್ಮಗಳ ಅನುಯಾಯಿಗಳು "ತಮ್ಮ ಧರ್ಮವೇ ಶ್ರೇಷ್ಠ"ವೆಂದು ಕಚ್ಚಾಡುವ ಮಂದಿಯಂತೆ ಜಗಳವಾಡ ತೊಡಗಿದರು. ಪ್ರತಿಯೊಬ್ಬನಿಗೂ ತಾನು ತಿಳಿದದ್ದೇ ಸತ್ಯವೆಂಬ ಹಠ. ಅಲ್ಲೊಬ್ಬ ಕಣ್ಣುಗಳುಳ್ಳ ಬುದ್ಧಿವಂತ ಕಾಣಸಿಕೊಂಡ. ಆತನು ಈ ವಿರಸವನ್ನು ನಿವಾರಿಸುವ ಪ್ರಯತ್ನ ಮಾಡಿದ. ಪ್ರತಿಯೊಬ್ಬ ಕುರುಡನಿಗೂ ಆನೆಯ ಶರೀರದ

ಎಲ್ಲಾ ಭಾಗಗಳನ್ನೂ ಸ್ಪರ್ಶಿಸುವ ಅವಕಾಶವನ್ನೊದಗಿಸಿ, ಆನೆಯ ನಿಜವಾದ ಸ್ವರೂಪವೇನೆಂಬುದನ್ನು ತಿಳಿಯುವಂತೆ ಮಾಡಿದ.

## ಅರ್ಧಜ್ಞಾನದಿಂದ ಅಪಾಯ:

ಇದೇ ರೀತಿಯಲ್ಲಿ ಈ ಲೋಕದಲ್ಲಿರುವ ಬೇರೆ ಬೇರೆ ದರ್ಶನ, ತತ್ವ, ಸಿದ್ಧಾಂತಗಳನ್ನು ಒಪ್ಪಿಕೊಂಡ ದಾರ್ಶನಿಕರು ಅರ್ಧಜ್ಞಾನದಿಂದಾಗಿ ಅರ್ಧಸತ್ಯವನ್ನು ಮಾತ್ರ ಅರಿತು, ಅದನ್ನೇ ಪೂರ್ಣಸತ್ಯವೆಂದು ಭಾವಿಸುತ್ತಾರೆ, ಇತರರನ್ನು ಹೀಗಳೆಯುತ್ತಾರೆ. ಇತರರ ವಾದಗಳನ್ನು ತಿರಸ್ಕರಿಸುತ್ತಾರೆ. ತಾನು ಅರ್ಥಮಾಡಿಕೊಂಡ ಸತ್ಯ, ತತ್ವ, ಸಿದ್ಧಾಂತಗಳ ಹೊರತು, ಇತರರ ಸಿದ್ಧಾಂತಗಳ ಬಗೆಗೆ ಅರಿವನ್ನು ಪಡೆಯಲಿಕ್ಕೂ ಸಿದ್ಧರಿರುವುದಿಲ್ಲ.

ಆಂಶಿಕ ಸತ್ಯವನ್ನೇ ಪೂರ್ಣ ಸತ್ಯವೆಂದು ಪರಿಭಾವಿಸುವ ದಾರ್ಶನಿಕರೂ ಕುರುಡರಂತೆಯೇ ಎಂದರೆ ತಪ್ಪಾಗದು. ಈ ನಿಟ್ಟಿನಲ್ಲಿ ಭಿನ್ನ- ಭಿನ್ನ ಮತ ಸಿದ್ಧಾಂತಗಳ ನಡುವೆ ಸಾಮರಸ್ಯವನ್ನು ಸ್ಥಾಪಿಸುವಲ್ಲಿ, ಒಂದು ಸತ್ಯಕ್ಕೆ ಅನೇಕ ಮುಖಗಳಿರಲು ಸಾಧ್ಯವೆಂದು ಒಪ್ಪಿಕೊಂಡಾಗಲೇ ಪರಿಪೂರ್ಣತೆ ಸಾಧ್ಯವೆಂದು ಅನೇಕಾಂತವಾದವು ಬಗೆಯಿತು.

ಎಲ್ಲಿ ಈ ತೆರನಾದ ಅನೇಕಾಂತವಾದವು ಆಚರಣೆಯಲ್ಲಿರುವುದೋ ಅಲ್ಲಿ ನೆಮ್ಮದಿ, ಸಂತೃಪ್ತಿ, ಶಾಂತಿ – ಸಮಾಧಾನಗಳು ನೆಲಸುತ್ತವೆ. ಈ ವಿಶ್ವದಲ್ಲಿ ನಿಜವಾದ ಸಾಮ್ಯವಾದವೆಂದರೆ ಅನೇಕಾಂತವಾದವೇ ಸರಿ. ರಕ್ತಪಾತ, ಹಿಂಸೆಗಳಿಂದ ಸ್ಥಾಪಿತವಾದ ಸಾಮ್ಯವಾದ ಮೂಲತಃ ಹಿಂಸಾವಾದ. ಬದಲಿಗೆ ಸಹ ಅಸ್ತಿತ್ವ, ಶಾಂತಿ, ಸಹನೆಗಳನ್ನು ಬೋಧಿಸುವ ಅನೇಕಾಂತವಾದದಿಂದ ಸ್ನೇಹ ವಿಶ್ವಾಸಗಳು ಮೂಡುತ್ತವೆ. ಬದುಕು ಸಹನೀಯವಾಗುತ್ತದೆ ಹಾಗೂ ಸಾರ್ವತ್ರಿಕ ಶಾಂತಿ ಸ್ಥಾಪನೆ ಸಾಧ್ಯವಾಗುತ್ತದೆ.

ತನ್ನ ನಂಬಿಕೆಯೇ ಪೂರ್ಣ ಸತ್ಯವೆಂದು ಹಠಮಾರಿತನದಿಂದ ನಡೆಯುವುದು ಅಪಾಯಕಾರಿ. ಸುತ್ತಲಿನ ಪ್ರಕೃತಿಯನ್ನು ಗಮನಿಸಿದರೆ ಅಲ್ಲೆಂತಹ ಸಹ ಅಸ್ತಿತ್ವವನ್ನು ಕಾಣುತ್ತೇವೆ! ಸಮರಸತೆಯನ್ನು ಗುರುತಿಸುತ್ತೇವೆ!

ಆಗಸದಲ್ಲಿ ತೇಲಾಡುವ ಮೋಡಗಳನ್ನೇ ನೋಡೋಣ. ಅವುಗಳಿಗೊಂದು ನಿರ್ದಿಷ್ಟ ಆಕಾರ, ಬಣ್ಣ, ಸ್ವರೂಪಗಳಿವೆಯೇ ? ಕೆಲವೊಮ್ಮೆ ಹತ್ತಿಯ ಉಂಡೆಯಂತೆ. ಕೆಲವೊಮ್ಮೆ ಇಂದ್ರನ ಐರಾವತದಂತೆ. ಮತ್ತೆ ಕೆಲವು ನಲ ನಾಗಾಲೋಟದಿಂದ ಜಿಗಿದಾಡುವ ಕುದುರೆಯಂತೆ ; ಒಮ್ಮೊಮ್ಮೆ ಬಿಳಿಯ ಮೊಲದಂತೆ. ಕೆಲವೊಮ್ಮೆ ಕರ್‍ರಗೆ ಬಾಯ್ದೆರೆದ ರಕ್ಕಸನ ವಿಕರಾಳ ಶರೀರದಂತೆ. ಆದರೆ ಎಲ್ಲವೂ ಮೋಡದ್ದೇ ರೂಪಗಳು. ಇವುಗಳ ಪೈಕಿ ಮೋಡಗಳ ಖಚಿತ ರೂಪ ಯಾವುದು ? ಯಾವುದೂ ಅಲ್ಲ; ಎಲ್ಲವೂ ಹೌದು. ಮೋಡದ ಅನೇಕ ರೂಪಗಳೂ ಒಂದೇ ಮೋಡದ ವಿವಿಧ ರೂಪಗಳನ್ನು ಅಭಿವ್ಯಂಜಿಸುತ್ತವೆ. ತನ್ಮೂಲಕ ವ್ಯಕ್ತವಾಗುವ ಸತ್ಯವೊಂದೇ. ಇದು ಅನೇಕಾಂತವಾದದ ದೃಷ್ಟಿಕೋನ.

ನಮ್ಮಲ್ಲಿ ಜಾತಿ - ವಿಜಾತಿಗಳೆಂಬ ಭೇದವಿದೆ. ಅವನು ಮೇಲು, ಇವನು ಕೀಳು ಎಂಬ ಭೇದಭಾವಗಳು. ಆವನು ಸ್ಪೃಶ್ಯ, ಇವನು ಅಸ್ಪೃಶ್ಯ - ಎಂಬ ಭಿನ್ನಭಾವಗಳು. ಆತ ಮಂದಿರದೊಳಗೆ ಬರಬಹುದು ; ಈತ ಬರಬಾರದು. ಈತ ಸಂಬಂಧಕ್ಕೆ ಯೋಗ್ಯ. ಆತ ಸಂಬಂಧಕ್ಕೆ ಅಯೋಗ್ಯ - ಎಂಬ ದೃಷ್ಟಿ ಭೇದಗಳು ಎಷ್ಟೊಂದು ವಿಚಿತ್ರ !

ತೀರ್ಥಂಕರರ ಸಮವಸರಣದಲ್ಲಿ ಮೇಲು-ಕೀಳು ಎನ್ನದೆ ಎಲ್ಲಾ ಮನುಷ್ಯರಿಗೂ ಪ್ರವೇಶವಿತ್ತು. ಪಶು-ಪಕ್ಷಿ-ಉರಗ, ಕ್ರಿಮಿ ಕೀಟಾದಿಗಳಿಗೂ ಪ್ರವೇಶವಿತ್ತು. ಎಲ್ಲರಿಗೂ ಅರ್ಥವಾಗುವಂತೆ ಅವರವರ ಭಾಷೆಯಲ್ಲೇ ತೀರ್ಥಂಕರರ ಅಮರವಾಣಿ ಮೊಳಗುತ್ತಿತ್ತು. ತೀರ್ಥಂಕರರ ಉಪದೇಶಾಮೃತವನ್ನು ಸವಿದವನಲ್ಲಿ ಕೀಳುತನಕ್ಕೆ ಅವಕಾಶವೆಲ್ಲಿ ? ತೀರ್ಥಂಕರರ ಬಗ್ಗೆ ನಂಬಿಕೆಯಿರಿಸಿದವ ಸಮ್ಯಗ್- ದೃಷ್ಟಿಯಾದ. ಮತ್ತೆ ಆವನಲ್ಲಿ ಕೀಳು ಮನೋವೃತ್ತಿಗೆ, ಕೀಳು ಆಚರಣೆಗೆ, ಕೆಟ್ಟ ಭಾವನೆಗಳಿಗೆ ಅವಕಾಶವುಳಿಯಲಾರದು; ಇಂತಹ ಪ್ರೇರಣೆಯನ್ನು ಅನೇಕಾಂತವಾದವೊದಗಿಸುತ್ತದೆ.

**ಖಚಿತ ನಿರ್ಣಯ ಅಗತ್ಯ :**

ಒಬ್ಬ ವ್ಯಕ್ತಿಯನ್ನು ಗಮನಿಸೋಣ. ಅವನನ್ನು ಸುಂದರ ಅನ್ನುತ್ತೇವೆ. ಆದರೆ ಈತನ ಪಕ್ಕದಲ್ಲಿ ಇವನಿಗಿಂತಲೂ' ಸುಂದರನನ್ನು ತಂದು ನಿಲ್ಲಿಸಿದರೆ, ಈತನೇ ಕುರೂಪಿಯೆನ್ನಿಸಬಹುದು. ಬಾಲ್ಯದಲ್ಲಿ ಸುಂದರವಾಗಿದ್ದ ಮಗುವೊಂದು ಬೆಳೆದು ಗಡ್ಡ-ಮೀಸೆಗಳು ಮೂಡಿದಾಗ ಅತ್ಯಂತ ಅಸುಂದರನೆನ್ನಿಸಬಹುದು. ಯೌವನದಲ್ಲಿ ಸೌಂದರ್ಯದಿಂದ ರಾರಾಜಿಸುತ್ತಿದ್ದ ವ್ಯಕ್ತಿಯೇ ವೃದ್ಧಾಪ್ಯ ಬಂದಾಗ ಕುರೂಪಿಯೆನ್ನಿಸಬಹುದು. ಇಂದು ವಿಶ್ವಸುಂದರಿಯೆಂದು ಆಯ್ಕೆ ಹೊಂದಿದ ಯುವತಿಯೇ ಕೆಲವು ವರ್ಷಗಳ ಬಳಿಕ ಸೌಂದರ್ಯ ಸಾಮ್ರಾಜ್ಯದಿಂದಾಚೆ ನಡೆದು, ಕುರೂಪಿಯೆಂದು ಎಲ್ಲರ ತುಚ್ಛೀಕಾರಕ್ಕೆ ಪಾತ್ರಳಾಗುವ ದಿನಗಳೂ ಬರಬಹುದು.

ಒಬ್ಬ ವ್ಯಕ್ತಿಯ ಅನೇಕ ರೂಪಗಳು ಆಯಾಯ ಕಾಲಕ್ಕೆ ಸತ್ಯವೆನಿಸಿದರೂ, 'ಇದಮಿತ್ಥಂ'- ಎಂದು ಶಾಶ್ವತವಾದ, ಖಚಿತವಾದ ನಿರ್ಣಯ ನೀಡುವಂತಿಲ್ಲ. ಮೂಲತಃ ಆ ಎಲ್ಲಾ ಸತ್ಯಗಳೂ ಸೇರಿದಾಗ 'ಪೂರ್ಣಸತ್ಯ'ವು 'ಅನೇಕಾಂತ' ವಾದುದೆಂದು ಅರ್ಥವಾಗಬಹುದು. ಒಂದೇ ಸತ್ಯಕ್ಕೆ 'ಅನೇಕ ಮುಖಗಳು' - ಎಂಬುದೂ ಅರಿವಾಗಬಹುದು.

ಯಾವುದೇ ಒಂದು ಧರ್ಮಕ್ಕೆ ಆಚಾರ ಹಾಗೂ ವಿಚಾರಗಳು ಎಂದು ಎರಡು ಮುಖ್ಯವಾದ ಅಂಶಗಳು. ಜೈನ ಧರ್ಮದ ವಿಚಾರಕ್ಕೆ ಅನೇಕಾಂತವಾದವೇ ಆಧಾರ ಹಾಗೂ ಆಚಾರಕ್ಕೆ ಅಹಿಂಸೆಯೇ ಮೂಲಾಧಾರ. ತೀರ್ಥಂಕರರು ನೀಡಿದ ಉಪದೇಶದ ತಿರುಳು "ಎಲ್ಲರೂ ಎಲ್ಲಾ ವಿಚಾರಗಳನ್ನೂ ತಿಳಿಯಲಿ, ಎಲ್ಲರೂ ಎಲ್ಲರ ರಕ್ಷಣೆ, ಪಾಲನೆ, ಪೋಷಣೆಗೆ ಅಗ್ರಸರರಾಗಲಿ" - ಎಂಬುದೇ ಆಗಿದೆ.

ತೀರ್ಥಂಕರರು ನೀಡಿದ ಉಪದೇಶಗಳೆಂದರೆ ಒಂದು ಧರ್ಮ, ಮತ, ಜಾತಿ, ಪಂಥ, ಸಂಪ್ರದಾಯದ ಹಿತಕ್ಕಾಗಿ ಅಲ್ಲ ; ಸಮಗ್ರ ಮನುಕುಲದ ಉದ್ಧಾರಕ್ಕಾಗಿ, ಎಲ್ಲಾ ಜಾತಿ, ಮತ, ಧರ್ಮ, ಪಂಥ, ಪಂಗಡ, ಸಂಪ್ರದಾಯಗಳ ಹಿತಕ್ಕಾಗಿ ಅವರು ಉಪದೇಶವನ್ನು ನೀಡಿದರು. ತೀರ್ಥಂಕರ ಪ್ರಣೀತವಾದ

ಉಪದೇಶಾಮೃತವೆಂದರೆ ಅದೊಂದು ಸರ್ವೋದಯ ತೀರ್ಥ. "ಪರಸ್ಪರೋಪಗ್ರಹೋ ಜೀವಾನಾಂ" - ಎಂಬ ಆದರ್ಶದಂತೆ ವ್ಯವಹರಿಸುತ್ತಾ ಈ ಸಂಸಾರ ಸಾಗರವನ್ನು ದಾಟ ಬಯಸುವವರಿಗೆ 'ಅನೇಕಾಂತವಾದ'ವೇ ಒಂದು ಪ್ರಾಣರಕ್ಷಕ ನಾವೆಯಾಗುವುದರಲ್ಲಿ ಸಂಶಯವಿಲ್ಲ.

ಭಗವಾನ್ ಮಹಾವೀರರು 'ಅನೇಕಾಂತವಾದ'ದ ಸಿದ್ಧಾಂತವನ್ನು ಈ ಜಗತ್ತಿಗೆ ಬೋಧಿಸಿ, ಮನುಕುಲಕ್ಕೆ ಬಹು ದೊಡ್ಡ ಉಪಕಾರವನ್ನೇ ಮಾಡಿದರು. ಪರಸ್ಪರ ಸಂಘರ್ಷದಲ್ಲಿ ತೊಡಗಿ 'ತನ್ನ ಮತವೇ ದೊಡ್ಡದು' - ಎಂದು ಹೋರಾಡುತ್ತಿದ್ದ ಜಗತ್ತಿನ ವಿವಿಧ ಮತ ಧರ್ಮಗಳ ನಡುವೆ ಒಂದು ಹೊಂದಾಣಿಕೆಯ ಮನೋ ಧರ್ಮಕ್ಕೆ ಚಾಲನೆ ನೀಡಿದರು.

ಅವರೆಂದರು "ಜ್ಞೇಯ ವಸ್ತುವಿಗೆ ಅನೇಕ ಸ್ವರೂಪಗಳಿವೆ. ಅನೇಕ ಧರ್ಮಗಳಿವೆ. ಅನೇಕ ಗುಣಗಳಿವೆ. ಒಂದೇ ರೂಪ, ಒಂದೇ ಧರ್ಮ, ಒಂದೇ ಸ್ವರೂಪವೆಂದು ಭಾವಿಸುವುದು ಮೂರ್ಖತನ. ಇವೆಲ್ಲವನ್ನೂ ಒಟ್ಟಾಗಿ ಪರಿಗ್ರಹಿಸಿದಾಗ ಮಾತ್ರ ಪೂರ್ಣ ಸತ್ಯವು ಅನೇಕಾಂತವಾದಿಯೆಂದರ್ಥ ವಾಗುವುದು."

ಯಾವುದೇ ಒಂದು ವಸ್ತುವಿನ, ಇಲ್ಲವೇ ವ್ಯಕ್ತಿಯ ಇತರ ಗುಣಗಳ ಅಪೇಕ್ಷೆಯನ್ನು ಗ್ರಹಣ ಮಾಡದೆ, ಕೇವಲ ಒಂದೇ ಗುಣ ಅಥವಾ ಅಭಿಪ್ರಾಯಕ್ಕೆ ಮನ್ನಣೆ ನೀಡುವುದು ಏಕಾಂತವಾದ. ಈ ಏಕಾಂತವಾದದ ಬಗೆಗಿನ ದುರಾಗ್ರಹವೇ ಈ ಜಗತ್ತಿನ ಅನೇಕ ಕಷ್ಟ - ಸಂಘರ್ಷ - ತೊಂದರೆಗಳಿಗೆ ಮೂಲ ಕಾರಣ. ವ್ಯಕ್ತಿ ವ್ಯಕ್ತಿಗಳ ನಡುವೆ, ಜಾತಿ - ಜಾತಿಗಳ ನಡುವೆ, ಧರ್ಮ - ಧರ್ಮಗಳ ನಡುವೆ, ರಾಷ್ಟ್ರ - ರಾಷ್ಟ್ರಗಳ ನಡುವೆ ಸಂಘರ್ಷಕ್ಕೆ ಕಾರಣವಾಗುತ್ತದೆ. ಅಮೆರಿಕ-ರಷ್ಯಾಗಳ ನಡುವೆ ಅನೇಕ ದಶಕಗಳ ಕಾಲ ಪರಸ್ಪರ ವಿದ್ವೇಷವಿತ್ತು. ಸಾಮ್ಯವಾದೀ - ಬಂಡವಾಳಶಾಹಿ ರಾಷ್ಟ್ರಗಳ ನಡುವಿನ ಸಂಘರ್ಷಕ್ಕೂ ಇಂತಹ ಮತಭೇದವೇ ಕಾರಣ.

## ಅನೇಕಾಂತವಾದಿಗಳಾಗೋಣ:

ಯಾವುದೇ ಒಂದು ವಸ್ತುವಿನ ಇತರ ಸ್ವರೂಪಗಳಿಗೂ ಮನ್ನಣೆ ನೀಡಿದಾಗ ಶಾಂತಿ ಸ್ಥಾಪನೆ ಸಾಧ್ಯವೆಂದು ಆಧುನಿಕ ಕಾಲದಲ್ಲಿ ತೋರಿಸಿಕೊಟ್ಟವರು - ಪಂಡಿತ ಜವಾಹರಲಾಲ ನೆಹರೂ ಅವರು. ಪಂಚಶೀಲಗಳನ್ನಾಧರಿಸಿದ ಸಹ ಅಸ್ತಿತ್ವದ, ತಾಟಸ್ಥ್ಯ ಧೋರಣೆಯ ಮೂಲದಲ್ಲಿ ಈ ಅನೇಕಾಂತವಾದದ ಸಿದ್ಧಾಂತವೇ ಅಡಗಿದೆ.

ಕುರುಡ ಹಿಡಿದದ್ದೇ ಬಡಿಗೆಯೆಂಬ ಧೋರಣೆಗಳಿಂದಾಗಿ – ಈ ಜಗತ್ತಿನಲ್ಲಿ ಅನೇಕ ಪಂಥಗಳ ಸ್ಥಾಪನೆಯಾಗಿದೆ. ಏಕಾಂತವಾದಿಗಳು ಅರ್ಧಸತ್ಯದ ಕನ್ನಡಕದಿಂದಲೇ ಜಗತ್ತನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಪೂರ್ಣಸತ್ಯ ವನ್ನರಿಯುವ ಪ್ರಯತ್ನವನ್ನೇ ಮಾಡುವುದಿಲ್ಲ.

ಓರ್ವ ಸ್ತ್ರೀ – ತನ್ನ ತಂದೆಗೆ ಮಗಳಾದರೆ, ಗಂಡನಿಗೆ ಪತ್ನಿ, ಅಣ್ಣನಿಗೆ ತಂಗಿ, ತಮ್ಮನ ಪಾಲಿಗೆ ಅಕ್ಕ, ಮೈದುನನ ಪಾಲಿಗೆ ಅತ್ತಿಗೆ, ಮಗನ ದೃಷ್ಟಿಯಲ್ಲಿ ಅಮ್ಮ ಮೊಮ್ಮಗನಿಗೆ ಅವಳೇ ಅಜ್ಜಿ. ಇಲ್ಲಿ ಸ್ತ್ರೀಯ ಯಾವ ರೂಪ ಸತ್ಯ ? ಯಾವುದು ಅಸತ್ಯ ? ಆಯಾ ಹಿನ್ನೆಲೆಯಲ್ಲಿ ನೋಡಿದರೆ ಎಲ್ಲವೂ ಸತ್ಯವೇ.

ಒಂದು ವಸ್ತುವಿನ ವಿಭಿನ್ನ ಪರಿಸ್ಥಿತಿ, ಹಿನ್ನೆಲೆ, ಗುಣ ಭಾವಗಳನ್ನರಿತು, ಗೌಣ ಮತ್ತು ಮುಖ್ಯ ಭಾವಗಳನ್ನು ಗುರುತಿಸಿ, ಪರಸ್ಪರ ಸಾಪೇಕ್ಷತೆಯಿಂದ ತಿಳಿಯುವುದೇ ಅನೇಕಾಂತವಾದ. ವಸ್ತುವಿನ, ಇಲ್ಲವೇ ವ್ಯಕ್ತಿಯ ಪೂರ್ಣ ಪರಿಚಯ, ವಾಸ್ತವಿಕ ಪರಿಚಯ ಅನೇಕಾಂತವಾದದಿಂದ ಮಾತ್ರ ಸಾಧ್ಯ.

ಈ ವಿಶ್ವದ ವಿವಿಧ ವಸ್ತುಗಳ ಬಗ್ಗೆ, ಅನೇಕ ಪ್ರಾಣಿಗಳ ಬಗ್ಗೆ, ವೈವಿಧ್ಯ ಪೂರ್ಣ ವ್ಯಕ್ತಿಗಳ ಬಗ್ಗೆ ಅನೇಕ ವೈಶಿಷ್ಟ್ಯಪೂರ್ಣ ಸಿದ್ಧಾಂತಗಳ ಬಗೆಗೆ 'ಇದು ಹೀಗೆಯೇ' ಎಂದು ಖಚಿತವಾದ ನಿರ್ಣಯ ನೀಡುವುದು ಅಸಾಧ್ಯ.

ಇಂದಿನ ಅಂತಿಮ ನಿರ್ಣಯಗಳೆಲ್ಲ ನಾಳೆಯ ಹೊಸ ಆವಿಷ್ಕಾರ - ಸಂಶೋಧನೆಗಳಿಂದ ಅಡಿಮೇಲಾಗುವ ಅಪಾಯವಿದ್ದೇ ಇದೆ.

ಆದುದರಿಂದ ಇಂದಿನ ನಮ್ಮ ಅಭಿಮತವೇ ಮೇಲು ; ಇದೇ ಅಂತಿಮ ಸತ್ಯ ; ಇದೇ ಕೊನೆಯ ತೀರ್ಮಾನ - ಎಂಬ ಆಗ್ರಹ ಸರಿಯಲ್ಲ - ಎಂದು ಹೃದಯಾಂತರಾಳದಿಂದ ಜ್ಞಾನೋದಯವಾದಾಗಲೇ ಅನೇಕಾಂತವಾದವೆಂಬ ನೂತನ ದೃಷ್ಟಿಯ ಉದಯ.

ಜೈನತತ್ವದ ಅತ್ಯಮೂಲ್ಯವಾದ ಕೊಡುಗೆಯೆಂದರೆ - ಈ ಅನೇಕಾಂತವಾದ. ವ್ಯಕ್ತಿ - ವ್ಯಕ್ತಿಗಳ ನಡುವೆ ಉದ್ಭವಿಸಿ, ಸಂತಾಪಕ್ಕೆ ಕಾರಣವಾಗುವ ಸಂಘರ್ಷದ ಪ್ರಸಂಗಗಳನ್ನು ನಿವಾರಿಸಿ, ಹೃದಯ - ಹೃದಯಗಳ ನಡುವೆ ಮಧುರ ಸಂವಾದಕ್ಕೆ ಕಾರಣವಾದ ಈ ಅನೇಕಾಂತವಾದದ ಮಹತ್ವವನ್ನು ನಾವು ಅರಿಯೋಣ.

ನಾವೆಲ್ಲರೂ ಅನೇಕಾಂತವಾದಿಗಳಾಗಲು ಪ್ರಯತ್ನಿಸೋಣ.

**ಭಗವಂತನ ಅನೇಕ ಹೆಸರುಗಳು:**

ಒಂದು ವಸ್ತುವಿನಲ್ಲಿ ಒಂದೇ ಸಮಯದಲ್ಲಿ ಕ್ರಮವತ್ತಾಗಿ ಮತ್ತು ಕ್ರಮ ರಹಿತವಾಗಿ ಅನೇಕ ಪ್ರಕಾರವಾದ ಗುಣಗಳು, ಧರ್ಮಗಳು, ಸ್ವಭಾವಗಳು ಇರುವುದಿದೆ. ಒಂದು ವಸ್ತುವು ಒಂದು ದೃಷ್ಟಿಯಿಂದ ನಿತ್ಯವೆಂದು ತೋರಿದರೆ ಇನ್ನೊಂದು ದೃಷ್ಟಿಯಿಂದ ಅನಿತ್ಯವೆಂದು ತೋರುವುದಿದೆ.

ಆದುದರಿಂದ ಎಲ್ಲಾ ದೃಷ್ಟಿಗಳಿಂದ ಒಂದು ವಸ್ತುವನ್ನು, ಒಂದು ವಿಷಯವನ್ನು, ಒಂದು ತತ್ತ್ವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಹೆಚ್ಚು ಅರ್ಥಪೂರ್ಣ ಹಾಗೂ ಹೆಚ್ಚು ಪ್ರಯೋಜನಕಾರಿ.

ಮಾನತುಂಗಾಚಾರ್ಯರು ಭಗವಂತನ ವಿವಿಧ ಹೆಸರುಗಳ ಬಗ್ಗೆ ಅನುಸರಿಸಿದ ಸಮನ್ವಯ ಧೋರಣೆಯ ಒಂದು ಶ್ಲೋಕ ಹೀಗಿದೆ :

ಬುದ್ಧಸ್ತ್ವಮೇವ ವಿಬುಧಾರ್ಚಿತ ಬುದ್ಧಿ ಬೋಧಾತ್
ತ್ವಂ ಶಂಕರೋಽಸಿ ಭುವನತ್ರಯ ಶಂಕರತ್ವಾತ್ ।

ಧಾತಾಸಿ ಧೀರ, ಶಿವ ಮಾರ್ಗ ವಿಧೇರ್ವಿಧಾನಾತ್
ವ್ಯಕ್ತಂ ತ್ವಮೇವ ಭಗವನ್ ಪುರುಷೋತ್ತಮೋಽಸಿ ॥

(ಎಲೈ ಧೀರನೇ, ದೇವತೆಗಳಿಂದ ಸನ್ಮಾನಿಸಲ್ಪಡುವ ಜ್ಞಾನವುಳ್ಳವನಾದುದರಿಂದ ನೀನೇ ಬುದ್ಧನು. ಮೂರು ಲೋಕಗಳಿಗೂ ಸುಖ ಶಾಂತಿಯನ್ನುಂಟು ಮಾಡುವವನಾದ್ದರಿಂದ ನೀನೇ ಶಂಕರನು. ಮೋಕ್ಷ ಮಾರ್ಗದ ವಿಧಿಯನ್ನು ವಿವರಿಸಿದುದರಿಂದಾಗಿ ನೀನೇ ವಿಧಾತ(ಬ್ರಹ್ಮ)ನು- ಭಗವಂತನೇ, ನೀನು ನಿಜವಾಗಿ ಪುರುಷೋತ್ತಮನಾಗಿದ್ದೀ.)

## ಸತ್ಯದ ಬಹುಮುಖಗಳು :

ಸತ್ಯವು ಒಂದೇ ಮುಖವುಳ್ಳದ್ದಲ್ಲ. ಅದಕ್ಕೆ ಬಹುಮುಖಗಳು. ಸತ್ಯದ ಬಹುಮುಖಗಳನ್ನು ಅರಿಯುವಲ್ಲಿ ಅನೇಕಾಂತವಾದವು ಒಂದು ಸಾಧನವೆಂದು ತಿಳಿಯಲಾಗಿದೆ. ಇದರಿಂದ ಎಲ್ಲಾ ಧರ್ಮಗಳಲ್ಲೂ ಸತ್ಯಾಂಶವಿದೆ – ಎಂದು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಅನೇಕಾಂತ ದೃಷ್ಟಿಯಿಂದ ನಮ್ಮ ವ್ಯಾವಹಾರಿಕ ಜೀವನದಲ್ಲೂ ಪ್ರಯೋಜನ ದೊರೆಯುತ್ತದೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರು ವಾದಿ ಮತ್ತು ಪ್ರತಿವಾದಿಗಳಿಬ್ಬರ ವಾದಗಳನ್ನು ಕೇಳಿದ ಬಳಿಕವೇ ತಮ್ಮ ಅಂತಿಮ ನಿರ್ಣಯವನ್ನು ನೀಡುತ್ತಾರೆ.

ಪ್ರಜಾಸತ್ತೆಯಲ್ಲೂ ಅಷ್ಟೆ. ಯಾವನೇ ಒಬ್ಬ ವ್ಯಕ್ತಿಯು ಅವನು ಎಷ್ಟೇ ದೊಡ್ಡವನಾಗಿದ್ದರೂ, ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬಹುಮತಕ್ಕೆ ತಲೆಬಾಗಬೇಕಾಗುತ್ತದೆ.

ಧಾರ್ಮಿಕ ರಂಗದಲ್ಲಿ ಪ್ರಜಾಪ್ರಭುತ್ವದ ಸಿದ್ಧಾಂತಗಳನ್ನು ಅನೇಕಾಂತವಾದಕ್ಕೆ ಪೂರಕವೆಂದು ಭಾವಿಸಬಹುದಾಗಿದೆ. ವಿಶ್ವದ ಉದ್ದಗಲಕ್ಕೆ ನಡೆಯುವ ಎಲ್ಲಾ ಕೋಲಾಹಲ, ಸಂಘರ್ಷ, ಗಲಭೆ, ಯುದ್ಧ ಹೋರಾಟಗಳಿಗೆ ಮೂಲ ಕಾರಣ – 'ನಮ್ಮದೇ ಸರಿ'ಯೆಂಬ ಏಕಾಂತ ದೃಷ್ಟಿಕೋನ.

ಇದರ ಬದಲಿಗೆ 'ಸಹ-ಅಸ್ತಿತ್ವ', 'ತಾಟಸ್ಥ' 'ಅಲಿಪ್ತತೆ'ಯ ಧೋರಣೆಗಳು ಅನೇಕಾಂತವಾದಕ್ಕೆ ಸಹಕಾರ ನೀಡುವಂತಿದೆ.

ವಿಶ್ವಮುದ್ದಗಲಕ್ಕೆ ಶಾಂತಿ, ಸಹನೆ, ಸಮಾಧಾನ, ಸೌಮ್ಯದಿ, ಸಂತೃಪ್ತಿಗಳು ಸ್ಥಿರವಾಗಿ ನಿಲ್ಲಬೇಕೆಂದಾದರೆ ಜಗತ್ತಿನ ಎಲ್ಲಾ ಜನರೂ ಏಕಾಂತವಾದವನ್ನು ತ್ಯಜಿಸಬೇಕು. ಅನೇಕಾಂತವಾದಿಗಳಾಗಬೇಕು.

|| ಜಯತು - ಜಿನಶಾಸನಂ ||